ಕ್ವಿಜ್: ನಾಳೆ ಅಂತಿಮ ಸುತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗದಿಂದ 'ದೀಕ್ಷಾ' ಸಹಯೋಗದಲ್ಲಿ 6ನೇ ಆವೃತ್ತಿಯ 'ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಷಿಪ್'ನ ಅಂತಿಮ ಸುತ್ತಿನ ಸ್ಪರ್ಧೆ ಗುರುವಾರ (ಜ.30) ನಗರದ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

ರಾಜ್ಯದ 11 ವಲಯಗಳಲ್ಲಿ ಕ್ವಿಜ್ ಚಾಂಪಿಯನ್‌ಷಿಪ್ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಅಂತಿಮ ಸುತ್ತಿಗೆ ಈ 11 ತಂಡಗಳ 22 ಮಂದಿ ವಿದ್ಯಾರ್ಥಿಗಳು ಸಜ್ಜಾಗಿದ್ದಾರೆ.

ಗುರುವಾರ ಬೆಂಗಳೂರು ವಲಯದ (ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಮತ್ತು ಕೋಲಾರ ಜಿಲ್ಲೆಗಳು) ಅರ್ಹತಾ ಸುತ್ತಿನ ಸ್ಪರ್ಧೆಗಳು ನಡೆಯಲಿವೆ. ಬೆಳಿಗ್ಗೆ 8.30ರಿಂದ ನೋಂದಣಿ ಆರಂಭವಾಗುತ್ತದೆ. ಬೆಳಿಗ್ಗೆ 9.30ಕ್ಕೆ ನಡೆಯುವ ಉದ್ಘಾಟನಾ

ಸಮಾರಂಭದಲ್ಲಿ ಬೆಂಗಳೂರು ಹಾಲು ಒಕ್ಕೂಟದ (ಬಿಎಎಂಯುಎಲ್) ಅಧ್ಯಕ್ಷ ನರಸಿಂಹಮೂರ್ತಿ ಹಾಗೂ ಬಿಡದಿಯ ಶಿವದರ್ಶನ ಶಶಿ ತಟ್ಟೆ ಇಡ್ಲಿ ಹೋಟೆಲ್‌ನ ಮಾಲೀಕ ಬಿ.ಸಿ.ಶಶಿಕುಮಾರ್ ಪಾಲ್ಗೊಳ್ಳುವರು. 12.30ರಿಂದ ಬೆಂಗಳೂರು ವಲಯ ಮಟ್ಟದ ಕ್ವಿಜ್ ಚಾಂಪಿಯನ್‌ಷಿಪ್‌ನ ಅಂತಿಮ ಹಣಾಹಣಿ ನಡೆಯಲಿದ್ದು, ದೀಕ್ಷಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಶ್ರೀಧರ್, ಬಿಬಿಎಂಪಿಯ ವಿಶೇಷ ಆಯುಕ್ತ (ಯೋಜನೆಗಳು) ರವಿಕುಮಾರ್ ಸುರಪುರ್‌ಪಾಲ್ಗೊಂಡು ವಲಯ ಮಟ್ಟದ ವಿಜೇತರಿಗೆ ಬಹುಮಾನ ವಿತರಿಸುವರು.

ಬೆಂಗಳೂರು ವಲಯದಿಂದ ಆಯ್ಕೆಯಾದ ತಂಡ ಸೇರಿದಂತೆ ಒಟ್ಟು 12 ತಂಡಗಳನ್ನು ಒಳಗೊಂಡ ಕ್ವಿಜ್ ಚಾಂಪಿಯನ್‌ಷಿಪ್‌ನ ಅಂತಿಮ ಸುತ್ತಿನ ಸ್ಪರ್ಧೆಗಳು ಮಧ್ಯಾಹ್ನ 2.30ರಿಂದ ಆರಂಭವಾಗಲಿದ್ದು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಹಾಜರಿದ್ದು ಅಂತಿಮ ಹಣಾಹಣಿಯನ್ನು ವೀಕ್ಷಿಸಿ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.

ವಿಜೇತ ತಂಡಕ್ಕೆ ₹ 50 ಸಾವಿರ ನಗದು ಬಹುಮಾನ ಇದೆ. 2ನೇ ಬಹುಮಾನ ₹ 30 ಸಾವಿರ, 3ನೇ ಬಹುಮಾನ ₹ 10 ಸಾವಿರ, 4ನೇ ಬಹುಮಾನ ₹ 6 ಸಾವಿರ, 5ನೇ ಬಹುಮಾನ ₹ 4 ಸಾವಿರ ನೀಡಲಾಗುವುದು.

10ನೇ ತರಗತಿವರೆಗಿನ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದು. ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಮತ್ತು ಕೋಲಾರ ವ್ಯಾಪ್ತಿಯ ಶಾಲೆಗಳು ಸ್ಪರ್ಧೆಯ ಬಗ್ಗೆ ಮಾಹಿತಿಗೆ 9606912242, 9742284543 ಸಂಪರ್ಕಿಸಬಹುದು.

ಶ್ರೀ ಶಿವ ದರ್ಶನ ಶಶಿ ತಟ್ಟೆ ಇಡ್ಲಿ ಹೋಟೆಲ್, ಬಿಡದಿ ಇವರು ಆಹಾರ ವಿತರಣೆಯ ಪಾಲುದಾರರಾಗಿದ್ದಾರೆ.

ಶುಕ್ರವಾರ ಸಂಪುಟ ವಿಸ್ತರಣೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸಂಪುಟ ವಿಸ್ತರಣೆ ಇದೇ ಶುಕ್ರವಾರ ನಡೆಯುವ ಸಾಧ್ಯತೆ ಇದೆ ಎಂದು ಬಿಜೆಪಿಯ ಉನ್ನತ ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವರಿಷ್ಠರ ಅನುಮತಿ ಪಡೆದು ನಾಳೆ (ಬುಧವಾರ) ಪಟ್ಟಿ ಆಖೈರುಗೊಳಿಸಲಿದ್ದಾರೆ. ಅಗತ್ಯವಿದ್ದರೆ, ಗುರುವಾರ ದೆಹಲಿಗೆ ಹೋಗಿ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಲಿದ್ದಾರೆ ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದರು.

ಒಂದು ವೇಳೆ ಶುಕ್ರವಾರ ಆಗದೇ ಇದ್ದರೆ ಭಾನುವಾರ ಖಚಿತ. ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಕೆಲವು ಹಿರಿಯರನ್ನು ಕೈಬಿಡುವ ಚಿಂತನೆಯೂ ನಡೆದಿದೆ. ಇದಕ್ಕೆ ವರಿಷ್ಠರ ಅನುಮತಿ ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ಸ್ಥಾನಗಳನ್ನು ಭರ್ತಿ ಮಾಡದೇ ಉಳಿಸಿಕೊಳ್ಳುವ ಸಾಧ್ಯತೆಯೂ ಇದೆ ಎಂದು ಅವರು ಹೇಳಿದರು.

ಈ ಮಧ್ಯೆ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ಶಾಸಕ ಮಹೇಶ್ ಕುಮಠಳ್ಳಿ, ಸಚಿವ ಸ್ಥಾನವೋ ನಿಗಮ- ಮಂಡಳಿಯೋ ಏನು ಸಿಗುತ್ತದೆಯೋ ಗೊತ್ತಿಲ್ಲ. ಯಾರಿಗೆ ಏನು ನೀಡಬೇಕು ಎಂಬುದು ಮುಖ್ಯಮಂತ್ರಿಯವರ ವಿವೇಚನೆಗೆ ಬಿಟ್ಟಿದ್ದು ಎಂದು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಮತ್ತೊಬ್ಬ ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಿ, ವಿಸ್ತರಣೆ ಬಗ್ಗೆ ಏನೂ ಮಾತನಾಡುವುದಿಲ್ಲ. ಸ್ವಲ್ಪ ದಿನ ಕಾಯಬೇಕಾಗುತ್ತದೆ ಎಂದು ಪ್ರತಿಕ್ರಿಯಿಸಿದರು.

ಪಿಎಫ್‌ಐ ನಿಷೇಧ ಗೃಹ ಸಚಿವರಿಗೆ ಪತ್ರ

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಮತ್ತು ಎಸ್‌ಡಿಪಿಐ ಅನ್ನು ನಿಷೇಧಿಸಬೇಕು ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಒತ್ತಾಯಿಸಿದ್ದಾರೆ.

ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಇವೆರಡೂ ಸಂಘಟನೆಗಳು ಸ್ಟೂಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ದಿಂದ ಹುಟ್ಟಿಕೊಂಡಿವೆ. ದೇಶದಲ್ಲಿ ಭಯೋತ್ಪಾದನೆ ಹುಟ್ಟು ಹಾಕುತ್ತಿವೆ. ಆದ್ದರಿಂದ, ತಕ್ಷಣವೇ ನಿಷೇಧಿಸಬೇಕೆಂದು ಗೃಹ ಸಚಿವರಿಗೆ ಪತ್ರ ಬರೆದಿರುವುದಾಗಿ ತಿಳಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ಭಯೋತ್ಪಾದನೆ ಹುಟ್ಟು ಹಾಕುತ್ತಿರುವ ಈ ಸಂಘಟನೆಗಳ ಜತೆ ನಂಟು ಇದೆ. ಇವುಗಳ ಸಂಬಂಧ ಇತ್ತೀಚಿನ ವರದಿಗಳಿಂದ ಬಯಲಾಗಿದೆ. ಸುಪ್ರೀಂಕೋರ್ಟ್‌ನಲ್ಲಿ ಪಿಎಫ್‌ಐ ಪರ ವಾದಿಸಲು ಕಾಂಗ್ರೆಸ್ ನಾಯಕರೂ ಆಗಿರುವ ಕಪಿಲ್ ಸಿಬಾಲ್ ಅವರು ಭಾರಿ ಪ್ರಮಾಣದ ಹಣ ಪಡೆದಿದ್ದಾರೆ ಎಂದೂ ಅವರು ಹೇಳಿದರು.

ಪರಿಷತ್: ಸವದಿ ಕಣಕ್ಕೆ ಸಾಧ್ಯತೆ

ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್ ಅವರ ರಾಜೀನಾಮೆಯಿಂದ ತೆರವಾಗಿರುವ ವಿಧಾನಪರಿಷತ್‌ನ ಒಂದು ಸ್ಥಾನಕ್ಕೆ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಈ ಸಂಬಂಧ ಈ ವಾರದ ಕೊನೆಯಲ್ಲಿ ಬಿಜೆಪಿ ಪ್ರಮುಖರು ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಿದ್ದಾರೆ. ಆ ಸಭೆಯಲ್ಲಿ ಸವದಿ ಅವರ ಹೆಸರನ್ನು ಪ್ರಕಟಿಸಲಾಗುವುದು ಎನ್ನಲಾಗಿದೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ ಸವದಿಯವರನ್ನು ಸಂಪುಟಕ್ಕೆ ತೆಗೆದುಕೊಳ್ಳುವುದರ ಜತೆಗೆ ಉಪಮುಖ್ಯಮಂತ್ರಿ ಹುದ್ದೆಯನ್ನೂ ನೀಡಲಾಯಿತು.

ಅಭ್ಯರ್ಥಿಯಾಗಿ ಆಯ್ಕೆ ಮಾಡುವ ಸಂಬಂಧ ಪಕ್ಷದಿಂದ ಈವರೆಗೂ ಯಾವುದೇ ಸೂಚನೆ ಬಂದಿಲ್ಲ ಎಂದು ಸವದಿ ಸುದ್ದಿಗಾರರಿಗೆ ತಿಳಿಸಿದರು.

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ರಾಮನಗರ ವಿಶೇಷ ವಿಭಾಗ, ರಾಮನಗರ.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಂಖ್ಯೆ: 26/2019–20 ದಿನಾಂಕ: 23.01.2020

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2019–20ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ ಒಟ್ಟು 04 ಸಂಖ್ಯೆಯ ಅಂದಾಜು ಮೊತ್ತ ರೂ.10.00 ಲಕ್ಷದಿಂದ ರೂ.45.75 ಲಕ್ಷದವರೆಗಿನ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ ಮುಂತಾದ ಇತರ ಮಾಹಿತಿಗಳನ್ನು http://www.eproc.karnataka.gov.in ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು **ದಿನಾಂಕ: 30–01–2020** ರಿಂದ **10–02–2020** ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
2. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ **ದಿನಾಂಕ: 10–02–2020** ವೇಳೆ **16:00** ಗಂಟೆಯೊಳಗೆ ಸಲ್ಲಿಸುವುದು.
3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 11–02–2020** ವೇಳೆ **16:30** ಗಂಟೆಗೆ. (ಸಾಧ್ಯವಾದಲ್ಲಿ).
4. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ನಂತರದಲ್ಲಿ ತಿಳಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸುವುದು.

ವಾಸಾಸಂಇ/ರಾಸ/358/2019–20 **ಸಹಿ/– ಕಾರ್ಯಪಾಲಕ ಇಂಜಿನಿಯರ್, ರಾಮನಗರ ವಿಶೇಷ ವಿಭಾಗ**

ಆರೋಗ್ಯ ಸೇವೆಗೆ ಇ–ಕಲಿಕಾ ವೇದಿಕೆ

ಬೆಂಗಳೂರು: ಆರೋಗ್ಯ ಸೇವಾ ಕ್ಷೇತ್ರದ ಸಿಬ್ಬಂದಿಯ ಕೌಶಲ ಹೆಚ್ಚಿಸುವ ನಿಟ್ಟಿನಲ್ಲಿ ಆರಂಭದಿಂದ ಅಂತ್ಯದವರೆಗೆ ಮೊಬೈಲ್ ಕಲಿಕಾ ವೇದಿಕೆ ಕಲ್ಪಿಸುವ 'ಐಪಿಸಿ ಹೆಲ್ತ್' ತಂತ್ರಾಂಶವನ್ನು ಇಂಪೆಲ್‌ಸಿಸ್ ಕಂಪನಿ ಅಭಿವೃದ್ಧಿ ಪಡಿಸಿದೆ.

'ಎಲ್ಲಿ ಬೇಕಾದರೂ, ಯಾವುದೇ ಸಮಯದಲ್ಲಾದರೂ ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಸಾದರಪಡಿಸುವ ಮೊದಲ ಉನ್ನತ ಮತ್ತು ಸಮಗ್ರ ಕಲಿಕಾ ಮಾರ್ಗ ಇದಾಗಿದೆ' ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಮೀರ್ ಶರೀಫ್ ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ, 'ಪ್ರಥಮ ಚಿಕಿತ್ಸೆ ನೀಡುವ, ಆಂಬುಲೆನ್ಸ್‌ನಲ್ಲಿಯೇ ತುರ್ತು ಚಿಕಿತ್ಸೆ ನೀಡುವಲ್ಲಿ ಆರೋಗ್ಯ ಸಿಬ್ಬಂದಿ ಕೌಶಲದ ಕೊರತೆ ಇದೆ. ಐಪಿಸಿ ಹೆಲ್ತ್ ಈ ಕೊರತೆ ತುಂಬಲಿದೆ' ಎಂದರು.

ಸರಗಳವು: ಇಬ್ಬರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ದ್ವಿಚಕ್ರ ವಾಹನದಲ್ಲಿ ಸುತ್ತಾಡಿ ಮಹಿಳೆಯರ ಸರಗಳವು ಮಾಡಿದ್ದ ಆರೋಪದಡಿ ಇಬ್ಬರನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಿಕ್ಕ ಬಾಣಸವಾಡಿಯ ರಾಮಮೂರ್ತಿ (33) ಹಾಗೂ ಎಲೆಕ್ಟ್ರಾನಿಕ್ ಸಿಟಿ ನಾಗನಾಥಪುರದ ಕಾರ್ತಿಕ್ ಅಲಿಯಾಸ್ ಕುಟ್ಟಿ (35) ಬಂಧಿತರು. ಅವರಿಂದ ₹ 1.50 ಲಕ್ಷ ಮೌಲ್ಯದ 3 ದ್ವಿಚಕ್ರ ವಾಹನ ಹಾಗೂ ₹ 12.28 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

'ಎನ್.ಆರ್. ಕಾಲೊನಿ 3ನೇ ಮುಖ್ಯರಸ್ತೆಯಲ್ಲಿ ಮಹಿಳೆಯೊಬ್ಬರ ಚಿನ್ನದ ಸರವನ್ನು ಆರೋಪಿಗಳು ಕಿತ್ತುಕೊಂಡು ಹೋಗಿದ್ದರು. ಆ ಸಂಬಂಧ ದೂರು ದಾಖಲಾಗಿತ್ತು. ಮತ್ತೊಂದು ಕೃತ್ಯ ಎಸಗಲು ಸಜ್ಜಾಗಿದ್ದ ಆರೋಪಿಗಳು ಇದೇ 22ರಂದು ಚಿಕ್ಕಬಾಣಸವಾಡಿಯ ಉತ್ತಮ್ ಸಾಗರ್ ಹೋಟೆಲ್ ಬಳಿ ನಿಂತಿದ್ದರು. ಕಾರ್ಯಾಚರಣೆ ನಡೆಸಿ ಅವರಿಬ್ಬರನ್ನು ಸೆರೆಹಿಡಿಯಲಾಗಿದೆ' ಎಂದರು.

'ನಗರದ 9 ಕಡೆಗಳಲ್ಲಿ ಕೃತ್ಯ ಎಸಗಿರುವುದಾಗಿ ಆರೋಪಿಗಳು ಬಾಯ್ಬಿಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ಓಎಲ್‌ಎಕ್ಸ್‌ನಲ್ಲಿ ಖರೀದಿ: 'ಸರಗಳವು ಎಸಗಲು ಸಂಚು ರೂಪಿಸಿದ್ದ ಆರೋಪಿಗಳು, ಅದಕ್ಕೆಂದೇ ಓಎಲ್‌ಎಕ್ಸ್ ಜಾಲತಾಣದಲ್ಲಿ ದ್ವಿಚಕ್ರ ವಾಹನ ಖರೀದಿಸಿದ್ದರು. ಕೃತ್ಯದ ನಂತರ ದ್ವಿಚಕ್ರ ವಾಹನವನ್ನು ಅದೇ ಜಾಲತಾಣದ ಮೂಲಕ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಕೃತ್ಯ ನಡೆದ ಸ್ಥಳದಲ್ಲಿದ್ದ ಸಿಸಿಟಿವಿ ಕ್ಯಾಮೆರಾ ದೃಶ್ಯಗಳಿಂದ ಆರೋಪಿಗಳ ಸುಳಿವು ಸಿಕ್ಕಿತ್ತು' ಎಂದು ಹೇಳಿದರು.

ವಾಟ್ಸ್‌ಆ್ಯಪ್ ವಿಡಿಯೊ ಕರೆ ಮಾಡಿ ಸೂಚನೆ: ಬಂಧನ

ಉಡುಗೊರೆ ನೀಡಲು ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಡರಾತ್ರಿ ಅಂಗಡಿಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಗವಾರದ ಸೈಯದ್ ಮಹಮ್ಮದ್ ಫೈಸಲ್ (23) ಮತ್ತು ದೊಡ್ಡಬೆಟ್ಟಹಳ್ಳಿ ನಿವಾಸಿ ಮಹಮ್ಮದ್ ಮೋಸಿನ್ (30) ಬಂಧಿತರು. ಅವರಿಂದ ₹ 6.50 ಲಕ್ಷ ಮೌಲ್ಯದ ವಿವಿಧ ಕಂಪನಿ ಕೈ ಗಡಿಯಾರ, ಕಾಸ್ಮೆಟಿಕ್ ಸಾಮಗ್ರಿ ಹಾಗೂ ಬೆಲೆ ಬಾಳುವ ಸಿಗರೇಟ್ ಪೊಟ್ಟಣಗಳನ್ನು ಜಪ್ತಿ ಮಾಡಲಾಗಿದೆ.

'ಲೈವ್ ಬ್ಯಾಂಡ್‌ಗೆ ಹೋಗುತ್ತಿದ್ದ ಆರೋಪಿ ಫೈಸಲ್, ಅಲ್ಲಿಯೇ ಹುಡುಗಿಯರನ್ನು ಪರಿಚಯ ಮಾಡಿಕೊಂಡಿದ್ದ. ಹೋದಾಗಲೆಲ್ಲ ಉಡುಗೊರೆ ಕೊಟ್ಟು ಸಲುಗೆ ಬೆಳೆಸಿಕೊಂಡಿದ್ದ. ಆರಂಭದಲ್ಲಿ ದುಡಿದ ಹಣದಲ್ಲಿ ಉಡುಗೊರೆ

ಫೈಸಲ್

ಮೋಸಿನ್

ನೀಡುತ್ತಿದ್ದ. ಅದು ಖಾಲಿಯಾಗುತ್ತಿದ್ದಂತೆ ಕಳ್ಳತನಕ್ಕೆ ಇಳಿದಿದ್ದ. ಅದಕ್ಕೆ ಇನ್ನೊಬ್ಬ ಆರೋಪಿ ಮೋಸಿನ್ ಕೂಡಾ ಸಾಥ್ ನೀಡಿದ್ದ' ಎಂದು ಪೊಲೀಸರು ಹೇಳಿದರು.

'ಅಂಗಡಿಗಳಿಗೆ ತಡರಾತ್ರಿ ನುಗ್ಗುತ್ತಿದ್ದ ಆರೋಪಿ, ಅಂಗಡಿಯಲ್ಲಿ ಸಿಕ್ಕ ವಸ್ತುಗಳೆಲ್ಲವನ್ನೂ ಕದ್ದೊಯ್ಯುತ್ತಿದ್ದ ಅಶೋಕನಗರ, ವೈಯಾಲಿಕಾವಲ್, ವಿಲ್ಸನ್ ಗಾರ್ಡನ್, ಸಂಪಂಗಿ ರಾಮನಗರ, ಕಬ್ಬನ್‌ಪಾರ್ಕ್ ಹಾಗೂ ಇಂದಿರಾನಗರ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಕಳ್ಳತನ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಆರೋಪಿ ಫೈಸಲ್ ಬಸವನಗುಡಿ, ಮಾಗಡಿ ರಸ್ತೆ ಹಾಗೂ ಹೈಗ್ರೌಂಡ್ಸ್ ಠಾಣೆ ವ್ಯಾಪ್ತಿಯಲ್ಲೂ ಈ ಹಿಂದೆ ಕಳ್ಳತನ ಎಸಗಿ ಸಿಕ್ಕಿಬಿದ್ದಿದ್ದ. ಜೈಲಿಗೂ ಹೋಗಿ ಬಂದಿದ್ದ' ಎಂದು ಪೊಲೀಸರು ಹೇಳಿದರು.

ವಾಟ್ಸ್‌ಆ್ಯಪ್ ವಿಡಿಯೊ ಕರೆ: 'ಇಬ್ಬರೂ ಆರೋಪಿಗಳು ವೃವಸ್ಥಿತ ಸಂಚು ರೂಪಿಸಿ ಕಳ್ಳತನ ಮಾಡುತ್ತಿದ್ದರು. ಆರೋಪಿ ಮೋಸಿನ್, ನಗರದಲ್ಲಿ ಜನರ ಓಡಾಟ ಕಡಿಮೆ ಇರುವ ಪ್ರದೇಶಗಳ ಅಂಗಡಿಗಳನ್ನು ಗುರುತು ಮಾಡುತ್ತಿದ್ದ. ಗ್ರಾಹಕರ ನೆಪದಲ್ಲಿ ಅಂಗಡಿಗೆ ಹೋಗಿ, ಅಲ್ಲಿ ಏನೆಲ್ಲ ಇದೆ ಎಂಬ ಬಗ್ಗೆ ತಿಳಿದುಕೊಳ್ಳುತ್ತಿದ್ದ' ಎಂದರು.

'ಅದೇ ಅಂಗಡಿಗಳಿಗೆ ತಡರಾತ್ರಿ ಫೈಸಲ್ ನುಗ್ಗುತ್ತಿದ್ದ. ಹಲವು ಬಾರಿ ಮನೆಯಲ್ಲೇ ಕುಳಿತಿರುತ್ತಿದ್ದ ಮೋಸಿನ್, ಫೈಸಲ್‌ಗೆ ವಾಟ್ಸ್‌ಆ್ಯಪ್‌ನಲ್ಲಿ ವಿಡಿಯೊ ಕರೆ ಮಾಡಿ ಕಳ್ಳತನಕ್ಕೆ ಸೂಚನೆ ನೀಡುತ್ತಿದ್ದ' ಎಂದು ತಿಳಿಸಿದರು.

INDIRA GANDHI NATIONAL OPEN UNIVERSITY

ignou THE PEOPLE'S UNIVERSITY

(A Central University, Under MHRD, Govt. of India)
IGNOU Regional Centre, # 70-46-30/11, Ward No. 117,
BMTC Old Divisional Office, Shanthinagar, Bangalore-560027
080-29607272 | www.ignou.ac.in | www.ignourcblr.in

IGNOU- JAN. 2020 ADMISSION - Last Date Extended till 31st Jan. 2020

Last date extended upto 31-01-2020 for both online and offline admission to its various Academic Programmes (Master, Bachelors, Diplomas & Certificate) from a premier Central University of India for Jan. 2020 session. Visit www.ignou.ac.in for online registration. Students can send their query to rcbangalore@ignou.ac.in OR send SMS/whatsapp message to 9449337272 for further information and to know more details. College Students can enrol for a Certificate Prog. for enhancing their skill & knowledge.

Regional Director

davp 21342/11/0007/1920

ಪುರಸಭೆ ಕಾರ್ಯಾಲಯ, ನೆಲಮಂಗಲ

ನೆಲಮಂಗಲ–562123 ಬೆಂಗಳೂರು ಗ್ರಾಮಾಂತರ ಜಿಲ್ಲೆ
ದೂರವಾಣಿ: 080–7722135, 080–7722735

ಕ್ರಮಾಂಕ:ಪುಸನೆ:ಕಿಅ:ವಿವ:42/19–20 ದಿನಾಂಕ:27.01.2020

"ಟೆಂಡರ್ ಪ್ರಕಟಣೆ" (E-Procurement Portal)

ನೆಲಮಂಗಲ ಪುರಸಭೆಯ ವ್ಯಾಪ್ತಿಯಲ್ಲಿ ಬರುವ 2015–16ನೇ, 2016–17ನೇ, 2017–18ನೇ, 2018–19ನೇ ಹಾಗೂ 2019–20ನೇ ಸಾಲಿನ 14ನೇ ಹಣಕಾಸು ಸಾ